**ದಿನಾಂಕ 14.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ: ಶ್ರೀ. ಎಂ.ಎನ್. ವಕೀಲರಿಂದಃ-**

ಬೆಂಗಳೂರಿನ ಕೇಂದ್ರ ಗುಪ್ತಚರ ಇಲಾಖೆಯಲ್ಲಿ ನಾನು ಜೂನಿಯರ್ ಇಂಟಲಿಜೆಂಟ್ ಅಧಿಕಾರಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿರುತ್ತೇನೆ. ನಾನು ನಿವೃತ್ತಿ ಹೊಂದಿ ಈಗ್ಗೆ 03 ವರ್ಷ ಕಳೆದಿರುತ್ತದೆ. ಕೆಂಗೇರಿಯಲ್ಲಿ ನಾನು ಮನೆಯನ್ನು ನಿರ್ಮಿಸಿಕೊಂಡು ವಾಸವಿರುತ್ತೇನೆ. ಕೆಂಗೇರಿಯಲ್ಲಿ ನಾನು ವಾಸವಿರುವ ಮನೆ 03 ಅಂತಸ್ತಿನಿಂದ ಕೂಡಿರುತ್ತದೆ.

ನನ್ನ ತಂದೆಗೆ ಒಟ್ಟು ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲನೇ ಹೆಂಡತಿ ನನ್ನ ತಾಯಿ ಸರೋಜಮ್ಮ ಆಗಿರುತ್ತಾರೆ. ಎರಡನೇಯವರು ತರೀಕೆರೆ ತಾಲ್ಲೂಕಿನ ತಿಮ್ಮಾಪುರದ ವಾಸಿ ಕರಿಯಮ್ಮನವರನ್ನು ಕಾನೂನು ಬಾಹೀರವಾಗಿ ಇಟ್ಟುಕೊಂಡಿದ್ದರು ಎಂದು ನುಡಿಯುತ್ತಾರೆ. ಸದರಿ ಕರಿಯಮ್ಮನವರಿಗೆ ಒಟ್ಟು ಮೂರು ಜನ ಮಕ್ಕಳಿರುತ್ತಾರೆ. ಅವರುಗಳೆಂದರೆ ವಿಜಯಕುಮಾರ್, ಅಮ್ಮಯ್ಯ ಮತ್ತು ಪ್ರಭಾಕರ ಆಗಿರುತ್ತಾರೆ. ನನ್ನ ತಾಯಿಗೆ ಒಟ್ಟು ಇಬ್ಬರು ಮಕ್ಕಳು. ಅವರುಗಳೆಂದರೆ ನಾನು ಮತ್ತು ಪ್ರತಿವಾದಿಯಾಗಿರುತ್ತೇವೆ. ನನ್ನ ತಂದೆಗೆ ಇಬ್ಬರು ಹೆಂಡತಿಯರು ಇದ್ದರು ಎಂಬ ಬಗ್ಗೆ ಮತ್ತು ಎರಡನೇ ಹೆಂಡತಿಯಾದ ಕರಿಯಮ್ಮನವರಿಗೆ ಒಟ್ಟು 03 ಜನ ಮಕ್ಕಳು ಇರುವ ಬಗ್ಗೆ ನನ್ನ ವಾದಪತ್ರದಲ್ಲಾಗಲಿ, ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಾಗಲಿ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿಯು ವಾದ ಪತ್ರದಲ್ಲಿ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ಎರಡನೇ ಹೆಂಡತಿಯ ಮಗಳಾದ ಅಮ್ಮಯ್ಯನವರನ್ನು ಈ ದಾವೆಯ ವಾದಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಸದರಿ ಅಮ್ಮಯ್ಯನವರನ್ನು ಈ ದಾವೆಯಲ್ಲಿ ಸೇರಿಸಲು ನನಗೆ ತೊಂದರೆ ಇರಲಿಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿಯು ಅಮ್ಮಯ್ಯನವರು ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.3 ರ ವಂಶವೃಕ್ಷದಲ್ಲಿ ಎರಡನೇ ಹೆಂಡತಿಯನ್ನು ಮತ್ತು ಎರಡನೇ ಹೆಂಡತಿಯ ಮಕ್ಕಳನ್ನು ಸೇರಿಸಿರುವುದಿಲ್ಲ ಎಂದರೆ, ಸಾಕ್ಷಿಯು ನನ್ನ ಕುಟುಂಬದ ವಂಶವೃಕ್ಷವನ್ನು ಮಾತ್ರ ನಮೂದಿಸಿ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ವಾಸವಿರುವ ಬೆಂಗಳೂರಿನ ಕೆಂಗೇರಿಯಲ್ಲಿರುವ 03 ಅಂತಸ್ತಿನಲ್ಲಿರುವ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಏಕೆಂದರೆ ಸದರಿ ಆಸ್ತಿಯ ನಿವೇಶನವನ್ನು ನನ್ನ ಹೆಂಡತಿಗೆ ಅವರ ಅಕ್ಕ ದಾನವಾಗಿ ನೀಡಿದ್ದು, ನನ್ನ ಹೆಂಡತಿಯು ಕೂಡಿಟ್ಟ ಹಣದಲ್ಲಿ ಸದರಿ ಮನೆಯನ್ನು ನಿರ್ಮಿಸಿಕೊಂಡಿದ್ದು, ಅದಕ್ಕೆ ನಾನು ಸಹ ನನ್ನ ನಿವೃತ್ತಿ ಹಣವನ್ನು ನೀಡಿ ಕಟ್ಟಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

ನನ್ನ ಹೆಂಡತಿಯು ಗೃಹಿಣಿ ಆಗಿರುತ್ತಾರೆ. ನನ್ನ ತಂದೆ ಪುಟ್ಟಸ್ವಾಮಿ ಮತ್ತು ನನ್ನ ಅಜ್ಜ ದುರ್ಗಪ್ಪ ಎಂ.ಆರ್.ರವರಿಗೆ ಸೇರಿ ಸರ್ವೆ ನಂ.54 ರಲ್ಲಿ ಒಟ್ಟು 13 ಎಕರೆ 20 ಗುಂಟೆ ಸರ್ಕಾರದಿಂದ 1970 ರಲ್ಲಿ ಮಂಜೂರಾಗಿರುತ್ತದೆ ಎಂದರೆ ಸರಿ. ಏಕೆಂದರೆ ನನ್ನ ತಂದೆ ಮತ್ತು ನನ್ನ ಅಜ್ಜ ಮಿಲಿಟರಿ ಎಕ್ಸ್ ಸರ್ವಿಸ್‌ಮೆನ್ಸ್ ಆಗಿರುವುದರಿಂದ ಸದರಿಯವರಿಗೆ ಸರ್ಕಾರದಿಂದ ಸದರಿ ಆಸ್ತಿಯನ್ನು ಮಂಜೂರು ಮಾಡಲಾಗಿತ್ತು ಎಂದು ನುಡಿಯುತ್ತಾರೆ. ಸರ್ವೆ ನಂ.54 ರಲ್ಲಿರುವ 13 ಎಕರೆ 20 ಗುಂಟೆ ಆಸ್ತಿಯನ್ನು ನನ್ನ ತಂದೆಯ ಇಬ್ಬರು ಹೆಂಡತಿಯರ ಮಕ್ಕಳುಗಳು ಸೇರಿ ಸುಮಾರು 2000 ರ ಸಾಲಿನಲ್ಲಿ ಪಂಚಾಯಿತಿದಾರರ ಸಮಕ್ಷಮ ಜುಬಾನೆ ಹಿಸ್ಸೆ ಮಾಡಿಕೊಂಡಿರುತ್ತೇವೆ. ನನಗೆ ಸರ್ವೆ ನಂ.54 ರಲ್ಲಿ ಒಟ್ಟು 04 ಎಕರೆ ಜಮೀನು ಬರಬೇಕಾಗಿತ್ತು, ಆದರೆ ನನ್ನ ಹೆಸರಿಗೆ 02 ಎಕರೆ 30 ಗುಂಟೆ ಆಸ್ತಿ ಖಾತೆ ಬಂದಿದ್ದು, ಆ ರೀತಿ ಹಂಚಿಕೆ ಆಗಿರುವ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ಸರ್ವೆ ನಂ.54 ರಲ್ಲಿರುವ ಒಟ್ಟು 13 ಎಕರೆ 20 ಗುಂಟೆ ಆಸ್ತಿಯ ಸಂಪೂರ್ಣ ಮಾಹಿತಿಯನ್ನು ನನ್ನ ವಾದಪತ್ರದ ಷೆಡ್ಯೂಲ್ ನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ವಾದಪತ್ರದ ಒಳಗೆ 13 ಎಕರೆ 20 ಗುಂಟೆ ಬಗ್ಗೆ ಸಂಪೂರ್ಣ ಮಾಹಿತಿ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂ.54 ರಲ್ಲಿರುವ ಒಟ್ಟು 13 ಎಕರೆ 20 ಗುಂಟೆ ಆಸ್ತಿಯನ್ನು ನನ್ನ ವಾದಪತ್ರದ ಚಕ್ಕುಬಂದಿಯಲ್ಲಿ ನಮೂದಿಸಲು ತೊಂದರೆ ಇರಲಿಲ್ಲ. ಸರ್ವೆ ನಂ.54 ರಲ್ಲಿರುವ ಒಟ್ಟು 13 ಎಕರೆ 20 ಗುಂಟೆ ಆಸ್ತಿಯು ನನ್ನ ತಂದೆಯ ಮೊದಲನೇ ಹೆಂಡತಿಯ ಮಕ್ಕಳಿಗೆ ಹಾಗೂ ಎರಡನೇ ಹೆಂಡತಿಯ ಮಕ್ಕಳಿಗೆ ವಿಭಾಗವಾಗಿ ಖಾತೆಯು ಸಹ ಅವರ-ಅವರ ಹೆಸರಿಗೆ ದಾಖಲಾಗಿರುತ್ತದೆ ಎಂದರೆ ಸರಿ.

2000 ನೇ ಸಾಲಿನಲ್ಲಿ ಜುಬಾನೆ ಹಿಸ್ಸೆಯಂತೆ ಸರ್ವೆ ನಂ.54 ರಲ್ಲಿರುವ 13 ಎಕರೆ 20 ಗುಂಟೆ ಆಸ್ತಿಯು ಖಾತೆಯಾಗಿರುವುದಿಲ್ಲ. 2000 ನೇ ಸಾಲಿನ ಜುಬಾನೆ ಹಿಸ್ಸೆಯಂತೆ

ಸರ್ವೆ ನಂ.54 ರಲ್ಲಿರುವ 13 ಎಕರೆ 20 ಗುಂಟೆ ಆಸ್ತಿಯನ್ನು ಖಾತೆ ಮಾಡಿಕೊಡಿ ಎಂದು ಕಡೂರಿನ ತಹಶಿಲ್ದಾರರವರಿಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 2000 ನೇ ಸಾಲಿನಲ್ಲಿ ಜುಬಾನೆ ಹಿಸ್ಸೆಯಂತೆ ಸರ್ವೆ ನಂ.54 ರಲ್ಲಿರುವ 13 ಎಕರೆ 20 ಗುಂಟೆ ಆಸ್ತಿಯು ಎಲ್ಲರ ಹೆಸರಿಗೆ ಖಾತೆಯಾಗಿರುವುದಿಲ್ಲ, ಬೇರೆ ರೀತಿ ಖಾತೆಯಾಗಿರುತ್ತದೆ. 2000 ನೇ ಸಾಲಿನ ಜುಬಾನೆ ಹಿಸ್ಸೆಯಂತೆ ಸರ್ವೆ ನಂ.54 ರಲ್ಲಿರುವ 13 ಎಕರೆ 20 ಗುಂಟೆ ಆಸ್ತಿ ಪೈಕಿ ಮೊದಲನೇ ಹೆಂಡತಿಯ ಇಬ್ಬರು ಗಂಡು ಮಕ್ಕಳಿಗೆ ಹಾಗೂ ಎರಡನೇ ಹೆಂಡತಿಯ ಇಬ್ಬರು ಮಕ್ಕಳಿಗೆ ತಲಾ 02 ಎಕರೆ 30 ಗುಂಟೆಯಂತೆ ಹಂಚಿಕೆ ಮಾಡಲಾಗಿತ್ತು ಹಾಗೂ ನನ್ನ ತಾಯಿ ಬದುಕಿದ್ದುದ್ದರಿಂದ ಅವರ ಜೀವನಾಂಶಕ್ಕಾಗಿ 02 ಎಕರೆ ಆಸ್ತಿಯನ್ನು ಹಂಚಿಕೆ ಮಾಡಲಾಗಿತ್ತು ಎಂದು ನುಡಿಯುತ್ತಾರೆ. 2000 ನೇ ಸಾಲಿನ ಜುಬಾನೆ ಹಿಸ್ಸೆಗೆ ಸಂಬಂಧಿಸಿದ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ನನ್ನ ವಕೀಲರಿಗೆ ನೀಡಿರುತ್ತೇನೆ. ಸದರಿ ಜುಬಾನೆ ಹಿಸ್ಸೆಯ ಪತ್ರಕ್ಕೆ ನನ್ನ ತಂದೆಯ ಎರಡು ಹೆಂಡತಿಯರ ಮಕ್ಕಳು ಸಹಿ ಮಾಡಿರುತ್ತೇವೆ.

ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಸರ್ವೆ ನಂ.54 ರಲ್ಲಿರುವ 13 ಎಕರೆ 20 ಗುಂಟೆ ಆಸ್ತಿಯ ಖಾತೆಯು ಯಾರ-ಯಾರ ಹೆಸರಿನಲ್ಲಿ ಇತ್ತು ಎಂದು ತಿಳಿದುಕೊಂಡೇ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ. 2000 ನೇ ಸಾಲಿನ ಜುಬಾನೆ ಹಿಸ್ಸೆಯಂತೆ ಸರ್ವೆ ನಂ.54 ರಲ್ಲಿರುವ 13 ಎಕರೆ 20 ಗುಂಟೆ ಆಸ್ತಿಯನ್ನು ತಲಾ 02 ಎಕರೆ 30 ಗುಂಟೆ ಆಸ್ತಿಯ ಸ್ವಾಧೀನವು ಅವರವರಿಗೆ ಹಸ್ತಾಂತರಿಸಿರುವುದಿಲ್ಲ. 13 ಎಕರೆ 20 ಗುಂಟೆ ಆಸ್ತಿಯನ್ನು ನೋಡಿಕೊಳ್ಳಲು ನಾನು ಶ್ರೀಧರರವರಿಗೆ ಸೂಪರ್ವೈಸಿಂಗ್ ಅನ್ನು ನೀಡಿದ್ದು, ಅದನ್ನು ಅವರು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಶ್ರೀಧರರವರಿಗೆ ನಾನು ಯಾವುದೇ ಸಂಬಳವನ್ನು ನೀಡಿರುತ್ತಿರಲಿಲ್ಲ, ಆದರೆ 13 ಎಕರೆ 20 ಗುಂಟೆ ಆಸ್ತಿಯ ಲಾಭವನ್ನು ತೆಗೆದುಕೊಂಡು ಅವರು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ.

2000 ನೇ ಸಾಲಿನ ಜುಬಾನೆ ಹಿಸ್ಸೆಯನ್ನು ಪಂಚಾಯಿತಿದಾರರ ಸಮಕ್ಷಮ ಮಾಡಿಕೊಳ್ಳುವಾಗ ನನ್ನ ತಂದೆಯ ಎರಡನೇ ಹೆಂಡತಿಯ ಗಂಡು ಮಕ್ಕಳು ಹಾಜರಿದ್ದರು. ಸದರಿ ಜುಬಾನೆ ಹಿಸ್ಸೆಯಲ್ಲಿ ನನ್ನ ತಂದೆಯ ಎರಡನೇ ಹೆಂಡತಿಯ ಇಬ್ಬರು ಗಂಡು ಮಕ್ಕಳಿಗೂ ಸಹ ತಲಾ 02 ಎಕರೆ 30 ಗುಂಟೆ ಆಸ್ತಿಯನ್ನು ಅವರ ಹಿಸ್ಸೆಗೆ ನೀಡಲಾಗಿತ್ತು.

ಅದರಂತೆ ಖಾತೆಯು ಸಹ ಅವರ ಹೆಸರಿಗೆ ಬಂದಿತ್ತು. ನನ್ನ ಹೆಸರಿಗೆ 02 ಎಕರೆ 30 ಗುಂಟೆ ಆಸ್ತಿಯ ಖಾತೆಯು ಜುಬಾನೆ ಹಿಸ್ಸೆಯಂತೆ ನನ್ನ ಹೆಸರಿಗೆ ಬಂದಿರುತ್ತದೆಯೋ ಇಲ್ಲವೊ ಎಂದು ನಾನು ನೋಡಿಕೊಂಡಿರುವುದಿಲ್ಲ. 2016 ರಲ್ಲಿ ನನ್ನ ಹೆಸರಿನಲ್ಲಿ ಖಾತೆ ಇರುತ್ತದೆಯೋ ಇಲ್ಲವೋ ಎಂದು ನೋಡಿಕೊಂಡಿರುತ್ತೇನೆ. ಜುಬಾನೆ ಹಿಸ್ಸೆಯಂತೆ ಎರಡನೇ ಹೆಂಡತಿಯ ಮಕ್ಕಳಿಗೆ ಸದರಿ ಸ್ವತ್ತಿನ ಸ್ವಾಧೀನವನ್ನು ಸ್ವಲ್ಪ ದಿನಗಳ ನಂತರ ಬಿಟ್ಟುಕೊಡಲಾಗಿರಬಹುದು, ನಾನು ಅದನ್ನು ನೋಡಿಕೊಳ್ಳದೇ ಇರುವುದರಿಂದ ಅದನ್ನು ನನಗೆ ಈಗ ಹೇಳಲು ಆಗುವುದಿಲ್ಲ. ಎರಡನೇ ಹೆಂಡತಿಯ ಸರ್ವೆ ನಂ.54 ರಲ್ಲಿರುವ 13 ಎಕರೆ 20 ಗುಂಟೆ ಆಸ್ತಿಯಲ್ಲಿ ಯಾವ ಭಾಗದಲ್ಲಿ ಬಿಟ್ಟುಕೊಡಲಾಗಿತ್ತು ಎಂದು ನನಗೆ ಗೊತ್ತಿಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು ಕಡೂರು.